# ಬನ್ನಿ ಬನ್ನಿ ಮಕ್ಕಳೇ

ಬನ್ನಿ ಬನ್ನಿ ಮಕ್ಕಳೇ
ನಾಡ ಕಟ್ಟಿ
ಬೆಳೆಸ ಬನ್ನಿ ಮಕ್ಕಳೇ

ಗಾಂಧಿ ತಾತಾ ನಡೆದ
ಅಹಿಂಸೆಯೆಂಬ ಪಥದಲಿ
ಅಭ್ಯುದಯ ಎಂಬ ಚಾಚಾ ನೆಹರೂ
ನುಡಿಯ ಜೊತೆಯಲಿ
ಸ್ವಾತಂತ್ರ್ಯ ಪಡೆದೇ ಪಡೆವೆನೆಂದ
ಸುಭಾಷ್ಚಂದ್ರರ ಹಠದಲಿ
ಶಾಂತಿಬೀಜ ಬಿತ್ತಿ ಬೆಳೆದು
ಪೈರನುಣ್ಣುವಾ
ಈ ನಾಡ ನೆಲದಲಿ

ಬನ್ನಿ ಬನ್ನಿ ಮಕ್ಕಳೇ
ನಾಡ ಕಟ್ಟಿ
ಬೆಳೆಸ ಬನ್ನಿ ಮಕ್ಕಳೇ

ಶಾಂತಿ ದೂತ ಶಾಸ್ತ್ರಿಯ
ಘೋಷ ವಾಕ್ಯವ
ನೆನೆಯುವ
ವಿವೇಕಾನಂದರ ವಿವೇಕವಾಣಿಯ
ವಿನಯದಿಂದ ಒಪ್ಪುವ
ವೀರರಾಣಿ ಚೆನ್ನಮ್ಮನ
ವೀರವಾಣಿಯ
ರಣಕಹಳೆ ಊದುವ
ಸರ್ದಾರ ಪಟೇಲರಂತೆ ದಿಟ್ಟ
ನಾಯಕನಾಗಿ ಹೊರಹೊಮ್ಮುವ
ಕಲಾಮರಂತೆ ದೇಶದೇಳ್ಗೆ ಬಯಸಿ
ಕನಸು ಕಾಣುವ

ಬನ್ನಿ ಬನ್ನಿ ಮಕ್ಕಳೇ
ನಾಡ ಕಟ್ಟಿ
ಬೆಳೆಸ ಬನ್ನಿ ಮಕ್ಕಳೇ

ವಿಶ್ವೇಶ್ವರಯ್ಯರಂತೆ ಬುದ್ಧಿಮತ್ತೆಯಿಂದ
ನಾಡ ಬೆಳಗುವ
ಕುವೆಂಪು ಬೇಂದ್ರೆ ಅಡಿಗರಂತೆ
ಕಾವ್ಯ ಸುಧೆಯ ಹರಿಸುವ
ಕಾರಂತ ತೇಜಸ್ವಿಯಂತೆ
ಸಾಹಿತ್ಯ ಕೃಷಿಯ ಮಾಡುವ
ನಾಡು–ನುಡಿಯ ಸೇವೆಗೆಂದು
ನಮ್ಮ ಬದುಕು
ಮುಡಿಪಾಗಿಡುವ

ಬನ್ನಿ ಬನ್ನಿ ಮಕ್ಕಳೇ
ಮುಂದೆ ಬನ್ನಿ ಮಕ್ಕಳೇ
ನಾಡ ಕಟ್ಟ ಬನ್ನಿ ಮಕ್ಕಳೇ

**– ಗೋಪಿ ಸಸಿತೋಟ**
**(ದಾನಮಾವು)**



---

# ಹಾರಲೇ ಹಕ್ಕಿ



ಪಂಜರದೊಳಗೇ ಸುತ್ತುತ್ತಿತ್ತು
ಹಾರುವಂತಹ ಹಕ್ಕಿ
ಬಿಡುಗಡೆಗೊಳ್ಳಲು ತವಕಿಸುತ್ತಿತ್ತು
ಗೂಡಿನ ಒಳಗೇ ಬಿಕ್ಕಿ

ಹಣ್ಣನು ಕಾಳನು ಕೊಟ್ಟರೂ ಕೂಡಾ
ತಿನ್ನದು ಕೊಕ್ಕಲಿ ಕುಕ್ಕಿ
ವಿಷಾದ ಭಾವದಿ ಅರಚುತ್ತಿತ್ತು
ದುಃಖದ ಕಡಲು ಉಕ್ಕಿ

ಏತಕೆ ನನ್ನನು ಹಿಡಿದು ತಂದು
ಬಂಧನದಲ್ಲಿ ಇಟ್ಟೆ?
ಅಂಗಳ ತುಂಬಾ ಹರಡಿದ ಕಾಳನು
ತಿನ್ನಲು ಹೋಗಿ ಕೆಟ್ಟೆ!

ಸಂಭ್ರಮದಿಂದ ವಿಹರಿಸುತ್ತಿದ್ದೆ
ಬಾನೇ ನನಗೆ ಎಲ್ಲೆ
ಹೊದರಿನ ಗೂಡನು ಹಸುರಿನ ಕಾನನು
ಬಿಟ್ಟಿರಲು ಒಲ್ಲೆ

ಕಾಡಿನ ಹಣ್ಣು ಒಗರಿನ ಚಿಗುರು
ನನ್ನಯ ಮೆಚ್ಚಿನ ತಿನಿಸು
ಮೆತ್ತನೆ ಕೂಳು ಒಣಗಿದ ಕಾಳು
ತಿನ್ನುವೆನೆಂಬುದು ಕನಸು

ಮೇಲಕೆ ಚಿಮ್ಮಿ ರೆಕ್ಕೆಯ ಬಡಿದು
ಹಾರುವ ಆಸೆ ನನಗೆ
ಬಂಧಿಯು ನಾನು ಹಾರಲಿ ಹೇಗೆ
ಸೀಮಿತ ಪರಿಧಿಯ ಒಳಗೆ?

ಇರಬಹುದಿಂತು ತಳಮಳಗೊಂಡ
ಮುದ್ದಿನ ಹಕ್ಕಿಯ ಅಳಲು
ಯೋಚಿಸುತ್ತಿದ್ದೆ ನೇವರಿಸುತ್ತ
ನುಣುಪಿನ ಕಪ್ಪಗೆ ಕೊರಳು

ಗೂಡನು ತೆರೆದು ಬಂಧನ ಬಿಡಿಸಿದೆ
ಹೋಗೆಲೆ ಹಕ್ಕಿ ಹಾರಿ!
ಗಿರಿಕಂದರದಲಿ ಸ್ವಚ್ಛಂದದಲಿ
ವಿಹರಿಸು ಬಳಗವ ಸೇರಿ!!

**–ಲೀಲಾ ದಾಮೋದರ, ಸುಳ್ಯ**